ಸಿ.ಸಿ. ನಂಬರ್: **250/2010**

ಸಿ.ಡಬ್ಲ್ಯು:**1**

ದಿ:**15-04-2026** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: ಪಿರ್ಯಾದಿ ಪರ ವಕೀಲರವರಿಂದ**

ನಿ.ಪಿ.2 ರಿಂದ 7 ರ ದಾಖಲೆಗಳನ್ನು ಕಾನೂನು ಬಾಹಿರವಾಗಿ ಸೃಷ್ಟಿ ಮಾಡಿದ್ದು ಹಾಗೂ ಅವುಗಳನ್ನು ಓ ಎಸ್ ನಂ.496/1996 ರಲ್ಲಿ ಹಾಜರು ಪಡಿಸಿರುತ್ತಾರೆ. 13 ನೇ ಆರೋಪಿಯು 12 ನೇ ಆರೋಪಿಗೆ ನಿ.ಪಿ.1 ರಂತೆ ಪತ್ರವನ್ನು ಬರೆದಿರುತ್ತಾನೆ. ಸದರಿ ಪತ್ರವನ್ನು ನ್ಯಾಯಾಲಯವು ನಂಬಬೇಕು ಎಂದು ಹೇಳಿ ಅದನ್ನು ಸೃಷ್ಟಿ ಮಾಡಿರುತ್ತಾರೆ. ನಿ.ಪಿ.1 ರಲ್ಲಿ 13 ನೇ ಆರೋಪಿಯ ಸಹಿ ಇರುತ್ತದೆ. ನಿ.ಪಿ.8 ರಿಂದ ನಿ.ಪಿ.17 ದಾಖಲೆಗಳು ಖೊಟ್ಟಿ ದಾಖಲೆಗಳು ಇದ್ದರೂ ಸಹ ಓ ಎಸ್ ನಂ.496/1996 ರಲ್ಲಿ ಹಾಜರು ಪಡಿಸಿರುತ್ತಾರೆ. ಮೂಲ ಕನವಿನಿಯನ್ಸ ದಾಖಲೆ ಸಿಗದೇ ಇದ್ದಿದ್ದರಿಂದ ದಾವಾ ಆಸ್ತಿಯು ಸರ್ವೇ ನಂ.ಆರ್ ಎಸ್ ನಂ.2 ಬಿ ದಲ್ಲಿ ಬರುತ್ತದೆ ಎಂದು ತೋರಿಸಲು ಸದರಿ ದಾಖಲೆಗಳನ್ನು ಹಾಜರು ಪಡಿಸಲು ಸೃಷ್ಟಿಸಿರುತ್ತಾರೆ. ಸದರಿ ದಾಖಲೆಗಳನ್ನು ಎರಡನೇ ಆರೋಪಿತನು ಹಾಜರು ಪಡಿಸಿರುತ್ತಾನೆ.

**ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.